# ಪ್ರಾರ್ಥನೆ

## ಭಾಗವತದಿಂದ

### ಶುಕಮುನಿಯ ಪ್ರಾರ್ಥನೆ

ನಮಃ ಪರಸ್ಮೈ ಪುರುಷಾಯ ಭೂಯಸೇ
ಸದುದ್ಭವಸ್ಥಾನನಿರೋಧಲೀಲಯಾ।
ಗೃಹೀತಶಕ್ತಿತ್ರಿತಯಾಯ ದೇಹಿನಾ-
ಮಂತರ್ಭವಾಯಾನುಪಲಕ್ಷ್ಯವರ್ತ್ಮನೇ॥

ಯಾವನು ವಿಶ್ವದ ಸೃಷ್ಟಿ-ಸ್ಥಿತಿ-ಪ್ರಳಯ ಕಾರ್ಯಗಳ ಲೀಲೆಯನ್ನು ಆಡುವುದಕ್ಕಾಗಿ ಸತ್ತ್ವ, ರಜಸ್ಸು ಮತ್ತು ತಮೋಗುಣರೂಪವಾದ ಮೂರು ಶಕ್ತಿಗಳನ್ನು ಧರಿಸಿ ಬ್ರಹ್ಮ, ವಿಷ್ಣು ಮತ್ತು ರುದ್ರರೂಪಿಯಾಗಿರುವನಲ್ಲದೇ ಸಮಸ್ತ ಚರಾಚರಪ್ರಾಣಿಗಳಲ್ಲಿ ಅಂತರ್ಯಾಮಿಯಾಗಿಯೂ ಬೆಳಗುತ್ತಿದ್ದಾನೆಯೋ ಮತ್ತು ಯಾವನ ಸ್ವರೂಪವನ್ನೂ ಮತ್ತು ಮಾರ್ಗವನ್ನೂ ಬುದ್ಧಿಯು ತಿಳಿಯಲಾರದೋ - ಅಂಥ ಅನಂತನೂ, ಅನಂತಮಹಿಮನೂ ಆದ ಪರಬ್ರಹ್ಮ-ಪರಮ ಪುರುಷನಿಗೆ ಕೋಟಿ ಕೋಟಿ ಪ್ರಣಾಮಗಳು.

ಭೂಯೋ ನಮಃ ಸದ್ವೃಜಿನಚ್ಛಿದೇಽಸತಾ-
ಮಸಂಭವಾಯಾಖಿಲಸತ್ತ್ವಮೂರ್ತಯೇ ।
ಪುಂಸಾಂ ಪುನಃ ಪಾರಮಹಂಸ್ಯ ಆಶ್ರಮೇ
ವ್ಯವಸ್ಥಿತಾನಾಮನುಮೃಗ್ಯದಾಶುಷೇ ॥

ಸಾಧುಸಂತರ ದುಃಖಗಳನ್ನು ಹೋಗಲಾಡಿಸಿ ದುಷ್ಟರನ್ನು ದಮನ ಮಾಡುವವನೂ, ಸಕಲಸತ್ತ್ವರೂಪಿಯಾಗಿ, ಸರ್ವಸಮನಾಗಿ ಎಲ್ಲರಿಗೂ ಮಂಗಳವನ್ನು ಉಂಟು ಮಾಡುವವನೂ, ಪರಮಹಂಸಾಶ್ರಮದಲ್ಲಿ ನೆಲೆಗೊಂಡವರಿಗೆ ಅಭೀಷ್ಟವಾದ ಮುಕ್ತಿಯನ್ನು ದಯಪಾಲಿಸುವವನೂ ಆದ ಆ ಪರಮಾತ್ಮನಿಗೆ ಮತ್ತೆ ಮತ್ತೆ ಪ್ರಣಾಮಗಳನ್ನು ಸಲ್ಲಿಸುತ್ತೇನೆ.

ನಮೋ ನಮಸ್ತೇಽಸ್ತ್ವೃಷಭಾಯ ಸಾತ್ವತಾಂ
ವಿದೂರಕಾಷ್ಠಾಯ ಮುಹುಃ ಕುಯೋಗಿನಾಮ್ ।
ನಿರಸ್ತಸಾಮ್ಯಾತಿಶಯೇನ ರಾಧಸಾ
ಸ್ವಧಾಮನಿ ಬ್ರಹ್ಮಣಿ ರಂಸ್ಯತೇ ನಮಃ ॥

ಓ ಯದುಕುಲಶಿರೋಮಣಿಯೇ! ನಿನಗೆ ನಮೋ ನಮಃ. ಎಣೆಯಿಲ್ಲದ ಗುಣೈಶ್ವರ್ಯಗಳಿಂದ ಸಂಪನ್ನನಾಗಿ ಸರ್ವೋತ್ತಮವಾದ ಪರಬ್ರಹ್ಮವೆಂಬ ಸ್ವಧಾಮದಲ್ಲಿಯೇ ಸರ್ವದಾ ರಮಿಸುತ್ತಿರುವವನು ನೀನು. ಭಕ್ತಿರಹಿತರಾದ ಕುಯೋಗಿಗಳಿಗೆ ಎಷ್ಟೇ ಪ್ರಯತ್ನಮಾಡಿದರೂ ನಿನ್ನ ದಿಕ್ಕು ದೆಸೆಗಳು ಹೇಗೆ ತಾನೇ ದೊರೆತಾವು?

# ಸೂಕ್ತಿಪ್ರಭ

## ತೀರ್ಥಯಾತ್ರೆ

**ಆ**ಗಿಂದ್ದಾಗ್ಗೆ ತೀರ್ಥಕ್ಷೇತ್ರಗಳನ್ನು ಸಂದರ್ಶಿಸುವುದು ಮತ್ತು ಅಲ್ಲಿ ಉಳಿದುಕೊಳ್ಳುವುದು ಒಳ್ಳೆಯದು. ಅವುಗಳಲ್ಲಿನ ಪವಿತ್ರ ವಾತಾವರಣ ಮತ್ತು ಸ್ಥಳದ ಬದಲಾವಣೆಗಳು ಮನಸ್ಸು ಮತ್ತು ದೇಹಗಳನ್ನು ಆರೋಗ್ಯಕರವನ್ನಾಗಿ ಇಡುತ್ತವೆ. ಹಾಗೆಯೇ ತೀರ್ಥಕ್ಷೇತ್ರಗಳು ಧ್ಯಾನಾಭ್ಯಾಸಕ್ಕೆ ಅನುಕೂಲಕರವೂ ಹೌದು.

*- ಸ್ವಾಮಿ ಬ್ರಹ್ಮಾನಂದ*

**ನೀ**ನು ಧ್ಯಾನಮಾಡುವಾಗ, ನೀನು ನೋಡಿದ ತೀರ್ಥಕ್ಷೇತ್ರಗಳನ್ನು ಮನಸ್ಸಿಗೆ ತಂದುಕೋ. ತೀರ್ಥಯಾತ್ರೆಗೆ ಹೋಗುವ ಉದ್ದೇಶವೇ ಅದು. ಬರೀ ಒಬ್ಬ ಪ್ರಯಾಣಿಕನಂತೆ ಯಾತ್ರೆ ಮಾಡಿದರೆ, ಆ ಕ್ಷೇತ್ರಗಳ ದರ್ಶನದಿಂದ ಏನೂ ಪ್ರಯೋಜನ ಉಂಟಾಗುವುದಿಲ್ಲ. ತೀರ್ಥಕ್ಷೇತ್ರಗಳು ಭಗವಂತನ ಮಹಿಮೆಯನ್ನು ಎತ್ತಿತೋರಿಸುವಂಥವು. ಭಗವಂತನನ್ನು ಚಿಂತಿಸುವಾಗ, ಆತನ ಶಕ್ತಿಯ ಅಭಿವ್ಯಕ್ತಿಗಳನ್ನೂ ಚಿಂತಿಸಬೇಕು. ತೀರ್ಥಕ್ಷೇತ್ರಗಳಲ್ಲಿ ಭಗವಂತನ ವಿಶೇಷ ಶಕ್ತಿ ವ್ಯಕ್ತವಾಗಿರುತ್ತದೆ. ಅವನು ದೇವಮಂದಿರದಲ್ಲಿ ಮಾತ್ರವೇ ಇರುವುದಿಲ್ಲ. ಅವನು ವಿಶ್ವನಾಥ, ವಿಶ್ವವ್ಯಾಪಕ - ಅವನ ಸಾನ್ನಿಧ್ಯ ಎಲ್ಲ ಕಡೆ ಇರುತ್ತದೆ. ಆದರೆ ತೀರ್ಥಕ್ಷೇತ್ರಗಳಲ್ಲಿ, ಸಾಧುಸಂತರಲ್ಲಿ ಮತ್ತು ಭಕ್ತರಲ್ಲಿ ಅವನು ವಿಶೇಷವಾಗಿ ಸನ್ನಿಹಿತನಾಗಿರುತ್ತಾನೆ.

*- ಸ್ವಾಮಿ ಶಿವಾನಂದ*

**ನಾ**ವೆಲ್ಲರೂ ನೈತಿಕತೆಯ ತೀರ್ಥಯಾತ್ರಿಗಳು. ಆಕಾಶದಲ್ಲಿರುವ ನಕ್ಷತ್ರಗಳಂತೆ ನಾವು. ದೇಶ-ಕಾಲಗಳೆಂಬ ಅನಂತ ಸೀಮೆಗಳ ನಡುವೆ ಪಯಣಿಸುತ್ತಿರುವ ಪಯಣಿಗರು ನಾವು.

*- ಹೆನ್ರಿ ಬೆಸ್ಟನ್*

**ನಾ**ವೆಲ್ಲರೂ ಅರಿತೋ ಅರಿಯದೆಯೋ ಬಾಳಿನಲ್ಲಿ ತೀರ್ಥ ಯಾತ್ರಿಗಳೇ. ಆದರೆ ನಮ್ಮಲ್ಲಿ ಕೆಲವರು, ಜೀವನ ಮಾರ್ಗದ ನಕಾಶೆಯನ್ನು ಹೊಂದಿರುತ್ತಾರೆ. *- ನೆಲ್ಲಿಸ್ ಡೆ ಮಿಲ್ಲೆ*

**ಬಾ**ಳೆಂಬುದು ತೀರ್ಥಯಾತ್ರೆ, ಬುದ್ಧಿವಂತನು ಹಾದಿಬದಿಯ ಛತ್ರಗಳಲ್ಲಿ ತಂಗುವುದಿಲ್ಲ. ಅವನು ತನ್ನ ಆತ್ಯಂತಿಕ ಗಮ್ಯಸ್ಥಾನವಾದ, ಚಿರಂತನ ಹಾಗೂ ಸೀಮಾತೀತ ಧಾಮದತ್ತಲೇ ದಾಪುಗಾಲು ಹಾಕುತ್ತಾನೆ. *- ಅನಾಮಿಕ*

**ನಾ**ನು ಈ ಜಗತ್ತಿನಲ್ಲಿ ಜೀವನವೆಂಬ ತೀರ್ಥಯಾತ್ರೆಯನ್ನು ಕೈಗೊಂಡಿರುವಾಗ, ಒಂದು ಬಗೆಯ ಮನೋಹರ ರಹಸ್ಯವು ಕೂಡಿಕೊಳ್ಳುತ್ತ, ವೃದ್ಧಿಯಾಗುತ್ತಿರುವಂತೆ ಭಾವಿಸುತ್ತೇನೆ.

*- ಎ.ಸಿ. ಬೆನ್‌ಸನ್*